**ದಿನಾಂಕ: 21–7–2023**

# "ಪರಿಸರ ಸಂರಕ್ಷಣೆ ಜಾಗ್ರತಿ ಕುರಿತಾದ ವಿಸ್ತರಣಾ ಕಾರ್ಯಕ್ರಮ"

ಡಾ. ಸಿ. ಡಿ. ದೇಶಪಾಂಡೆ ಭೂಗೋಳಶಾಸ್ತ್ರ ಅಧ್ಯಯನ ವೃತ್ತ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡದ ಅಡಿಯಲ್ಲಿ ದಿನಾಂಕ 21–7–2023 ರಂದು ಧಾರವಾಡ ತಾಲ್ಲೂಕಿನ ಕ್ಯಾರಕೊಪ್ಪ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ **"ಪರಿಸರ ಸಂರಕ್ಷಣೆ ಜಾಗ್ರತಿ ಕುರಿತಾದ ವಿಸ್ತರಣಾ ಕಾರ್ಯಕ್ರಮ"**ವನ್ನು ಏರ್ಪಡಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ. ಜೆ. ಎಲ್. ಕಲ್ಯಾಣ ಅವರು ವಹಿಸಿದ್ದರು. ಹಾಗೂ ಕಲಾ ಮಹಾವಿದ್ಯಾಲಯದ ಪ್ರೊ. ಡಿ. ಬಿ. ಕರಡೋಣಿ ಉಪಸ್ತಿತರಿದ್ದರು. ಈ ಸಮಾರಂಭದಲ್ಲಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿಯರಾದ ಶ್ರೀಮತಿ ಭಾರತಿ ಎಂ. ದೊಡ್ಡಮನಿ ಹಾಗು ಶಾಲೆಯ ಸಿಬ್ಬಂಧಿ ವರ್ಗ ಮತ್ತು ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಕುಮ್ಮೂರ, ಅಧ್ಯಯನ ವೃತ್ತದ ಕಾರ್ಯಾಧ್ಯಕ್ಷರಾದ ಪ್ರೊ. ಶ್ರೀಮತಿ. ವ್ಹಿ. ಬಿ. ಸಾವಿರಮಠ ಹಾಗು ಪ್ರೊ. ಎಸ್. ಎಸ್. ಮೋಟೆಬೆನ್ನೂರ ಹಾಗು ವಿಭಾಗದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗು ಶಿಕ್ಷಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಅಧ್ಯಯನ ವೃತ್ತದ ಅಡಿಯಲ್ಲಿ ಈ ಹಿಂದೆ ಬಿ.ಎ / ಬಿ.ಎಸ್ಸಿ ವಿದ್ಯಾರ್ಥಿಗಳಿಗೆ **"ಪರಿಸರ ಸ್ನೇಹಿ ಹತ್ತಿ ಬಟ್ಟೆ ಕೈಚೀಲ"** ಗಳನ್ನು ತಯಾರಿಸಲು ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು, ಅವರು ತಯಾರಿಸಿದ ಸುಮಾರು 30 ಕ್ಕೂ ಹೆಚ್ಚು ಹತ್ತಿ ಬಟ್ಟೆಯ ಕೈಚೀಲಗಳನ್ನು ಈ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು ಹಾಗೂ 30 ಕ್ಕೂ ಹೆಚ್ಚು ಸಸಿಗಳನ್ನು ಆವರಣದಲ್ಲಿ ನೆಡುವುದರ ಮೂಲಕ ಕಾರ್ಯಕ್ಷಮವನ್ನು ಯಶಶ್ವಿಗೊಳಿಸಲಾಯಿತು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ. ಡಿ. ಬಿ. ಕರಡೋಣಿಯವರು ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದ್ದು ಮಕ್ಕಳ ಪಾತ್ರ ಬಹು ದೊಡ್ಡದು ಎಂದರೆ, ಪ್ರೊ. ಜೆ. ಎಲ್. ಕಲ್ಯಾಣ ಅವರು ಮಕ್ಕಳಲ್ಲಿ ಪರಿಸರ ಸಂರಕ್ಷಣೆಯ ಜಾಗ್ರತಿ ಮೂಡಿಸುವುದು ನಮ್ಮೆಲ್ಲರ ಹೊಣೆಯಾಗಿದ್ದು ಈ ಕಾರ್ಯಕ್ರಮ ಒಂದು ಮಾದರಿಯಾಗಿದೆ ಎಂದು ಮಾತನಾಡಿದರು.